ಶ್ರೀ ಹಂಜಿ ಶಿವಣ್ಣ.—ಕಳೆದವರ್ಷ ಜಂಬದಹಳ್ಳ ಅರ್ಧ ಭಾಗ ತುಂಬಿದ್ದು ಈ ಕೆರೆ ಕಟ್ಟಿದ ಮೇಲೆ ತುಂಬಲಿಲ್ಲ. ಹೆಸರಿಗೆ ಸರ್ಕಾರ ಈ ಯೋಜನೆಯನ್ನು ಮಂಜೂರು ಮಾಡಿವ್ಯಾರೆ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಜಂಬದಹಳ್ಳದ 1 ಕೋಟಿ 10 ಲಕ್ಷ ರೂಪಾಯಿಯ ಯೋಜನೆಯನ್ನು ಜಾಗ್ರತೆ ಕಾರ್ಯಗತ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜಂಬದಹಳ್ಳದಲ್ಲಿ ನೀರೇ ಇಲ್ಲದಿರುವಾಗ, ಆ ವ್ಯಾಲಯೊಳಗೆ ಬೇರೆ ಕೆರೆಗಳನ್ನು ಕಟ್ಟುವುದಕ್ಕೆ ಕಷ್ಟತಮವಾಗುತ್ತದೆ. ಜಂಬದಹಳ್ಳಕ್ಕೆ ಯಾವ ರೀತಿ ನೀರು ಒದಗಿಸಬೇಕು ಎಂಬ ವಿಷಯಕ್ಕೆ ಬೇರೆ ಪ್ರಶ್ನೆ ಹಾಕಿದರೆ, ವಿಚಾರ ಮಾಡಿ ತಿಳಿಸಿಕೊಡುತ್ತೇನೆ.

Public Men's Inquiry Bill

494. **Sri D. B. KALMANKAR** (Afzalpur). —

Will the Chief Minister be pleased to state :—

(*a*) whether the Government proposes to introduce a Bill called the Public Men's Inquiry Bill ;

(*b*) if so, when ?

Sri D. DEVARAJ URS (Chief Minister).—

(*a*) Government propose to introduce a LOKAYUKTA Bill which will contain adequate provisions to deal with such matter.

(*b*) At an early date.

Sri D. B. KALMANKAR.—Sir, May I know who will come under this Bill ?

† **Sri D. DEVARAJ URS.**—The public servants including the Legislators and Ministers perhaps.

Sri D. B. KALMANKAR.—You have said that the Bill will be introduced early. I want to know whether it is going to be introduced in this session ?

Sri D. DEVARAJ URS.—The Bill is before the Scrutiny Committee. I will try to see that it comes up during this Session only.

ಶ್ರೀ ಕೋಣಂಧೂರು ಲಿಂಗಪ್ಪ.—ಈ ಲೋಕ ಆಯುಕ್ತ ವಿಧೇಯಕದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವವರು ಬರುತ್ತಾರೆ ಎಂದು ಹೇಳಿದಿರಿ, ಹಳೆಯ ಎಂ.ಎಲ್.ಎ., ಎಂ.ಎಲ್.ಸಿ., ಎಲ್ಲರೂ ಬರುತ್ತಾರೋ ಅಥವಾ ಕೆಲವರು ಮಾತ್ರ ಬರುತ್ತಾರೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಯಾರು ಯಾರು ಬರಬೇಕೋ ಅವರು ಬರುತ್ತಾರೆ, ಹಳೆಯವರು ಇದರಲ್ಲಿ ಬರುತ್ತಾರೆ, ಆದರೆ ನತ್ತು ಹೋಗಿರುವವರು ಬರಬೇಕು ಎಂದರೆ ಹೇಗೆ ಸಾಧ್ಯ ? ಪ್ರಸ್ತುತದಲ್ಲಿ, ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರು ಬರಬೇಕಾಗುತ್ತದೆ ಎಂದು ಇಷ್ಟು ಮಾತ್ರ ಹೇಳಬಹುದು.

Sri MALLIKARJUNA KHARGE.—May I know salient features of the Lok Ayukth ?

Sri D. DEVARAJ URS.—There is an enactment to see that the people who work as public men not only public servants, but also

Government servants and also the Legislators and Ministers who have to maitain their moral conduct properly are to be booked if they have amassed illegal wealth against their moral Code.

Fish Famine in Deep Sea

699. Sri P. M. BANGI (Jamkhandi).—

Will the Minister of State for Fisheries be pleased to state :—

(*a*) whether Government is aware of the fish famine in the deep sea on the West Coast lines of North and South Kanara ;

(*b*) if so, whether it is a fact that fish famine is caused by over-fishing by local fishermen and also by Maharashtra fishermen sailing by steam launches and also by Japanese fishermen coming near Malpe and other ports ;

(*c*) whether any reliefs are given by the Government to fishermen on costal lines hit by the fish famine this year ;

(*d*) if so, the details of such relief given ?

Sri K. T. RATHOD (Minister of State for Fisheries).—

(*a*) Government are aware that there is fish famine in the in-shore waters of our State but there is no report of fish famine in the deep sea on the west coast-lines of North and South Kanara districts.

(*b*) No.

(*c*) Yes.

(*d*) The Government have sanctionod interest free loan of Rs. 250 per family.

ಶ್ರೀ ಪಿ. ಎಂ. ಬಂಗಿ.—ಮಲ್ಪೆ ಬಂದರಿನಲ್ಲಿ ಮೂರು ವರ್ಷಗಳ ಹಿಂದೆ ಸ್ಪೀವ್ ರಾಂಚಸ್ ಎಷ್ಟು ಇದ್ದವು ಈಗ ಎಷ್ಟು ಆಗಿವೆ ಎಂದು ಹೇಳುವುದಕ್ಕೆ ಬರುತ್ತದೆಯೇ ?

† ಶ್ರೀ ಕೆ. ಟಿ. ರಾಥೋಡ್.—ತಾವು ಕೇಳಿದ ಉಪಪ್ರಶ್ನೆ, ಈ ಪ್ರಶ್ನೆಯ ಕಕ್ಷೆಯಲ್ಲಿ ಬರುವುದಿಲ್ಲ. ಬೇಕಾದರೆ ವಿವರ ತರಿಸಿಕೊಡುತ್ತೇನೆ.

ಶ್ರೀ ಪಿ. ಎಂ. ಬಂಗಿ.—ಮಲ್ಪೆ ಮತ್ತು ಉಳಿದ ಬಂದರುಗಳಲ್ಲಿ ಓವರ್ ಫಿಷಿಂಗ್ ಆಗುವುದಕ್ಕೆ ಕಾರಣ ಜಪಾನೀಸ್ ಬೋಟುಗಳಲ್ಲಿ ಅವರು ಬಂದು ಫಿಷಿಂಗ್ ಮಾಡಿಕೊಂಡು ಹೋಗುತ್ತಾರೆ. ಇದರಿಂದ ಫಿಷ್ ಫ್ಯಾಮಿನ್ ಉಂಟಾಗಿದೆ ಎಂದು ಹೇಳುತ್ತಾರೆ. ಈ ಬಗ್ಗೆ ತಾವು ಏನಾದರೂ ಎನ್‌ಕ್ವಯರಿ ಮಾಡಿದ್ದೀರಾ ?

ಶ್ರೀ ಕೆ. ಟಿ. ರಾಥೋಡ್.—ಓವರ್ ಫಿಷಿಂಗ್‌ನಿಂದ ಕ್ಷಾಮ ಬರುತ್ತದೆ ಎಂದರೆ, ಅದು ಅಷ್ಟು ಸಮಂಜಸವಾದ ವಿಚಾರವಲ್ಲ ಎಂದು ನನ್ನ ಅಭಿಪ್ರಾಯ. ಈ ಬಗ್ಗೆ ಈಗಾಗಲೇ ನಾವು ವಿಚಾರ ವಿನಿಮಯ ಮಾಡಲಿಕ್ಕೆ ಒಂದು ಸಮಿತಿಯನ್ನು ನೇಮಿಸಿದ್ದೇವೆ. ಆ ಸಮಿತಿಯವರು ಅದನ್ನು ಪರಿಶೀಲನೆ ಮಾಡುತ್ತಾರೆ.